ಪದವಿಪೂರ್ವ ರೇಷ್ಮೆ ಕೃಷಿ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಬಿ. ಎ. ಬಿ. ಎಂ. ಭಾಗ 1 ಕ್ಕೆ ಪ್ರವೇಶ ಕೊಡುವುದು

೮೭೮. ಶ್ರೀ ಬಾಗಲಕೋಟೆ (ಜಮಖಂಡಿ).—ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ. ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ ಎರಡು ವರ್ಷ ಪದವಿ ಪೂರ್ವ ರೇಷ್ಮೆ ಕೃಷಿ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಬಿ. ಎ. ಬಿ. ಎಂ. ಭಾಗ–೧ ಕ್ಕೆ ಪ್ರವೇಶ ಕೊಡಲಾಗಿದೆಯೆ ?

ಆ. ಹಾಗಿಲ್ಲದಿದ್ದಲ್ಲಿ ರಾಜ್ಯದ ಇನ್ನುಳಿದ ವಿಶ್ವ ವಿದ್ಯಾನಿಲಯಗಳಲ್ಲಿ ಈ ರೀತಿ ಪ್ರವೇಶ ಕೊಡಲಾಗಿದೆಯೆ ?

ಇ. ಹಾಗಿದ್ದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಮಾತ್ರ ಈ ತಾರತಮ್ಯವೇಕೆ ? ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಈ ಕೆಳ ಕಂಡ ವಿಶ್ವವಿದ್ಯಾ ನಿಲಯಗಳಿಗೆ ಪ್ರವೇಶ ಕೊಡಲಾಗುತ್ತಿದೆ.

೧. ಕರ್ನಾಟಕ ವಿಶ್ವವಿದ್ಯಾನಿಲಯ

೨. ಮೈಸೂರು ವಿಶ್ವವಿದ್ಯಾನಿಲಯ

೩. ಗುಲ್ಬರ್ಗಾ ವಿಶ್ವವಿದ್ಯಾನಿಲಯ

೪. ಬೆಂಗಳೂರು ವಿಶ್ವವಿದ್ಯಾನಿಲಯ

ಈಗ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ಕೊಡಲಾಗುತ್ತಿಲ್ಲ. ಈ ವಿಷಯವನ್ನು ಅಂತರ ವಿಶ್ವವಿದ್ಯಾನಿಲಯಗಳ ಮಂಡಲಿಯ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದನ್ನು

ಶ್ರೀ ಜೆ. ಎಸ್. ಬಾಗಲಕೋಟೆ.—ಸ್ವಾಮಿ ಕರ್ನಾಟಕ ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ ಎರಡು ವರ್ಷದ ಪದವಿ ಪೂರ್ವ ರೇಷ್ಮೆ ಕೃಷಿ ಡಿಪ್ಲೊಮಾ ಪಾಸಾದ ವಿದ್ಯಾರ್ಥಿ ಬಿ. ಎ. ಬಿ. ಎಂ. ಭಾಗ ೧ ಕ್ಕೆ ಸೇರುವುದಕ್ಕೆ ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಅನುಮತಿ ಕೊಡುತ್ತಾ ಇಲ್ಲ ಎನ್ನುವ ಪತ್ರಗಳ ವಿದ್ಯಾರ್ಥಿಗಳಿಂದ ಬಂದಿರುವುದರಿಂದ ದಯವಿಟ್ಟು ಆ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರುವ ಹಾಗೆ ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆ ವಿದ್ಯಾರ್ಥಿಗಳಿಂದ ಬಂದಂಥ ಪತ್ರಗಳನ್ನು ನನಗೆ ಕಳಂಹಿಸಿ ಕೊಡಲಿ, ಆದರಲ್ಲಿ ನ್ಯೂನತೆ ಏನಾದರೂ ಇದ್ದರೆ ಸರಿಪಡಿಸುತ್ತೇನೆ.

ಗುಲ್ಬರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳ ಮೇಲ್ವಿಚಾರಣೆ.

೫೪೫. ಶ್ರೀ ಮಾಲಿಕಯ್ಯ ಗುತ್ತೇದಾರ್ (ಆಫಜಲ್‌ಪುರ್).—

ಅ. ಗುಲ್ಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳ ಉಸ್ತುವಾರಿ ನೋಡಿಕೊಳ್ಳಲು ತೆರೆಯಲಾದ ಸಾರ್ವಜನಿಕ ಇಂಜನಿಯರಿಂಗ್ ಉಪ ವಿಭಾಗಗಳ ಸಂಖ್ಯೆ ಎಷ್ಟು ?

ಆ. ಕುಡಿಯಂಪ ನೀರಿನ ಯೋಜನೆಗಳ ಮತ್ತು ಕೊಳವೆ ಬಾವಿಗಳ ದುರಸ್ತಿ ಮೇಲ್ವಿಚಾರಣೆಗೆ ಇರುವ ಸಿಬ್ಬಂದಿಯ ಸಂಖ್ಯೆ ಎಷ್ಟು ?

ಇ. ಈ ಯೋಜನೆಗಳಿಗನ್ವಯ ಸಿಬ್ಬಂದಿ ಕೊರತೆ ಇದೆ ಎನ್ನುವುದು, ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ. ಹಾಗಿದ್ದಲ್ಲಿ ಹೆಚ್ಚಿನ ಸಿಬ್ಬಂದಿ ಮತ್ತು ಹೊಸ ವಿಭಾಗಗಳನ್ನು ಪ್ರಾರಂಭಿಸಲು ಸರ್ಕಾರದವರು ಯೋಚಿಸಿದ್ದಾರೆಯೆ ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮೀಣ ಅಭಿವೃದ್ಧಿ ಮಂತ್ರಿ, ಪಂಚಾಯತ್ ರಾಜ್ ಇಲಾಖೆಯ ಸಚಿವರು).—

ಅ. ಮಂಜೂರು

ಆ. ವಿವಿಧ ಪ್ರವರ್ಗಗಳ ಒಟ್ಟು ೧೮ ಹುದ್ದೆಗಳಿವೆ.

ಇ. ಬಂದಿದೆ.

ಈ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಮಾಲಿಕಯ್ಯ ಗುತ್ತೇದಾರ್ ರವರ ಪ್ರಶ್ನೆಯಾ[illegible] ಸದಸ್ಯರಾದ ಶ್ರೀ ಡಿ. ಎ. ಚಿನ್ನಪ್ಪನವರು ಪ್ರಶ್ನೆಯನ್ನು ಕೇಳಬಹುದು

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ ಈ ಊರಿನಲ್ಲಿ ಬಹಳಷ್ಟು ಬೋರ್‌ವೆಲ್‌ಗಳ ಪಂಪುಸೆಟ್ಟುಗಳು ಹಾಳಾಗಿವೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂದು ತಿಳಿಸಬೇಕು ?

ಶ್ರೀ ಬಿ. ಆರ್. ಯಾವಗಲ್.—ಬೋರ್‌ವೆಲ್‌ಗಳು ಹಾಳಾಗಿವೆ ಎಂದು ಹೇಳುವ ಬದಲು ಸ್ಪೆಸಿಫಿಕ್ ಆಗಿ ಯಾವ ಬೋರ್‌ವೆಲ್‌ಗಳ ಪಂಪುಸೆಟ್ಟುಗಳು ಹಾಳಾಗಿವೆ ಎಂದು ಹೇಳಿದರೆ ಕ್ರಮ ತೆಗೆದು ಕೊಳ್ಳುತ್ತೇವೆ. ಈಗಾಗಲೇ ಆ ಬಗ್ಗೆ ಜಿಲ್ಲಾ ಮಟ್ಟದಲ್ಲಿ ದುರಸ್ತಿಗೊಳಿಸುವ ಸಿಬ್ಬಂದಿಯನ್ನು ಇಟ್ಟಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ.—ದುರಸ್ತಿ ಮೇಲ್ವಿಚಾರಣೆಗೆ ಇರುವ ಸಿಬ್ಬಂದಿಗಳ ಪೋಸ್ಟ್ ಖಾಲಿ ಇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ತಿಳಿಸಬೇಕು.

ಶ್ರೀ ಬಿ. ಆರ್. ಯಾವಗಲ್.—ಸದಸ್ಯರುಹೇಳುವ ರೀತಿಯಲ್ಲಿ, ಹಿಂದಿನ ವ್ಯವಸ್ಥೆಯ ಪ್ರಕಾರ ದುರಸ್ತಿ ಮೇಲಿಚಾರಕರು ಹುದ್ದೆಗಳು ೧೮ ಇವೆ. ಅವುಗಳಲ್ಲಿ ೭ ಹುದ್ದೆಗಳು ಖಾಲಿ ಇವೆ. ಹೊಸ ವ್ಯವಸ್ಥೆಯ ಪ್ರಕಾರ ಪ್ರತಿಯೊಂದೂ ತಾಲ್ಲೂಕಿಗೂ ಸುಮಾರು ೫ ಜನ ಸಿಬ್ಬಂದಿಯನ್ನು ಕೊಡುತ್ತೇವೆ ಹಾಗೂ ಸಂಚಾರಿ ದುರಸ್ತಿ ಮೇಲ್ವಿಚಾರಕರನ್ನು ನೇಮಿಸುತ್ತೇವೆ. ಆಗ ಸಮಸ್ಯೆಗಳು ಬಗೆ ಹರೆಯುತ್ತವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅನೇಕ ತಾಲ್ಲೂಕುಗಳಲ್ಲಿ ಅಸಿಸ್ಟೆಂಟ್ ಎಕ್ಸ್‌ಕ್ಯೂಟಿವ್ ಇಂಜಿನಿಯರ್‌ಗಳ ಪೋಸ್ಟ್ ಖಾಲಿ ಇವೆ. ನಮ್ಮ ಯಾದ್‌ಗಿರ್ ಸಬ್ ಡಿವಿಷನಲ್ಲೂ ಅಸಿಸ್ಟೆಂಟ್ ಇಂಜಿನೀಯರ್‌ಗಳ ಪೋಸ್ಟ್ ಖಾಲಿ ಇವೆ. ನಮ್ಮ ಜಿಲ್ಲೆಯಲ್ಲಿ ಹಾಕಿರುವ ಬೋರ್‌ವೆಲ್‌ಗಳ ಪೈಕಿ ೨೫ ಪರ್‌ಸೆಂಟ್ ಬೋರ್‌ವೆಲ್‌ಗಳು ಫೇಲ್ಯೂರ್ ಆಗಿವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಹಾಕಿರುವ ಬೋರ್‌ವೆಲ್‌ಗಳಲ್ಲೂ ೨೫ ಪರ್‌ಸೆಂಟ್ ಬೋರ್‌ಲ್‌ಗಳು ಫೇಲ್ಯೂರ್ ಆಗಿದೆ. ಇವುಗಳನ್ನು ಸಮಗ್ರವಾಗಿ ದುರಸ್ತಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ? ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡುತ್ತಿರಿ ? ಹೈಸ್ಪಿಡ್ ರಿಗ್‌ಗಳನ್ನು ತರಿಸಿ ಆಳವಾಗಿ ಬೋರ್‌ವೆಲ್‌ಗಳನ್ನು ತೋಡಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಯಾದ್‌ಗಿರ್ ಡಿವಿಷನಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ ಹುದ್ದೆ ಖಾಲಿ ಇದೆ. ಅದನ್ನು ಆದಷ್ಟು ಬೇಗ ತುಂಬುತ್ತೇವೆಂದು ಆಶ್ವಾಸನೆ ಕೊಡುತ್ತೇನೆ. ಇನ್ನು ಕೊಳವೆ ಬಾವಿಗಳು ಒಣಗಿ ಹೋಗವುದು ಸರ್ವವ್ಯಾಪಿ ಸಮಸ್ಯೆಯಾಗಿದೆ. ಆಳವಾಗಿ ಕೊರೆಯುವ ರಿಗ್ ಯಂತ್ರಗಳನ್ನು ತಂದು ಕೊಳವೆ ಬಾವಿಗಳನ್ನು ತೋಡಿಸುವ ಬಗೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನ ಕಾನ್ಸ್‌ಟಿಟ್ಯೂಯನ್ಸಿಯಲ್ಲಿ ಯಾವಾಗ ಹೈಸ್ಪಿಡ್ ಯಂತ್ರಗಳಿಂದ ಬಾವಿಗಳನ್ನು ಕೊರೆಸುತ್ತೀರೆಂದು ಹೇಳಬೇಕು. ಏಕೆಂದರೆ ಮೆಸ್ಟ್ ಇಂಟರೆಸ್ಟ್ ಅಧಿಕಾರಿಗಳು ತಮಿಳು ನಾಡಿನ ಮತ್ತು ಆಂಧ್ರದ ಬೋರ್‌ವೆಲ್ ಕಂಟ್ರಾಕ್ಟರುಗಳಿಗೆ ಬಾವಿಗಳನ್ನು ಕೊರೆಯುವುದಕ್ಕೆ ಕಾಂಟ್ರಾಕ್ಟ್ ಕೊಟ್ಟು ಸರಿಯಾಗಿ ಬಾವಿಗಳನ್ನು ತೋಡಿಸುತ್ತಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸಭಾಧ್ಯಕ್ಷರೇ, ಕೆಲವು ಕಡೆ ಈ ಬೋರ್‌ವೆಲ್‌ಗಳ ತೊಂದರೆ ಇದೆ. ಹೈಸ್ಪೀಡ್ ರಿಗ್ ಯಂತ್ರ ಈಗ ಒಂದು ಮಾತ್ರ ನಮ್ಮಲ್ಲಿ ಇದೆ. ಹಳೆಯ ತಂತ್ರಜ್ಞಾನದಿಂದ ತೋಡುವ ಯಂತ್ರಗಳು ನಮ್ಮಲ್ಲಿ ಇರುವುದರಿಂದ ಅವುಗಳಿಗೆ ಹೆಚ್ಚು ಆಳವಾಗಿ ತೋಡುವುದಕ್ಕೆ ಸಾಮರ್ಥ್ಯ ಇರುವುದಿಲ್ಲ. ಆದುದರಿಂದ ಪ್ರೈವೇಟ್ ಕಾಂಟ್ರ್ಯಾಕ್ಟರುಗಳಿಗೆ ಬಾವಿಗಳನ್ನು ತೋಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ನಾವು ಬಿ. ಡಬ್ಲ್ಯು. ಡಿ. ಇಲಾಖೆಯಿಂದ ಸಹಾಯ ಪಡೆದು ಬೋರ್‌ವೆಲ್‌ಗಳನ್ನು ಹಾಕಿಸುತ್ತಿದ್ದೇವೆ. ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಕೊಳವೆ ಬಾವಿಗಳನ್ನು ತೋಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಸರ್ಕಾರದಲ್ಲಿ ಇಂಜಿನಿಯರ್‌ಗಳು ಇಲ್ಲ. ಬಿ. ಡಿ. ಓ ಗಳು ಇಲ್ಲ. ಏನು ಇಲ್ಲ. ಹೋಗಲಿ ನಿಮ್ಮ ಸರ್ಕಾರದಲ್ಲಿ ಏನು ಇದೆ ಅದನ್ನಾದರೂ ಹೇಳಿ.

ತೋಟಗಾರಿಕೆ ಇಲಾಖೆಯಲ್ಲಿರುವ ದಿನಗೂಲಿ ಸಿಬ್ಬಂದಿ

೩೨೮. ಶ್ರೀ ಕೆ. ಕುಶಾಲ್ (ಸುಳ್ಯ).—ಮಾನ್ಯ ತೋಟಗಾರಿಕೆ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ತೋಟಗಾರಿಕೆ ಇಲಾಖೆಯಲ್ಲಿ ಎಷ್ಟು ಜನ ದಿನಗೂಲಿ ನೌಕರರಿದ್ದಾರೆ ;

ಆ) ೧೯೭೨ ರಿಂದ ಸದರಿ ನೌಕರರು ದಿನಗೂಲಿ ನೌಕರರಾಗಿಯೇ ಮುಂದುದರಿಯುತ್ತಿರುವುದು ಸರ್ಕಾರದ ಪರ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ದಿನಗೂಲಿ ನೌಕರರನ್ನು ಹುದ್ದೆಯಲ್ಲಿ ಖಾಯಂ ಮಾಡದೇ ಇರಲು ಕಾರಣವೇನು ;

ಈ) ಸುಳ್ಯ ತಾಲ್ಲೂಕಿನಲ್ಲಿರುವ ದಿನಗೂಲಿ ನೌಕರರಿಗೆ ಮೂರು ತಿಂಗಳಿಂದ ವೇತನವನ್ನು ಪಾವತಿ ಮಾಡದೇ ಇರಲು ಕಾರಣವೇನು?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆಯ ಇಲಾಖೆಯ ರಾಜ್ಯ ಮಂತ್ರಿಗಳು).—

ಅ) ೨೫೩೪

ಆ) ಹೌದು,

ಇ) ಕನಿಷ್ಟ ೧೨೦೦ ದಿವಸಗಳ ಸೇವೆ ಸಲ್ಲಿಸಿದ ೧೧೬೮ ದಿನಗೂಲಿ ನೌಕರರನ್ನು ಖಾಯಂ ಗೊಳಿಸಿಲಾಗಿದೆ. ಉಳಿದ ಪ್ರಶ್ನೆ ಈಗಾಗಲೇ ಸರಕಾರದ ಪರಿತೀಲನೆಯಲ್ಲಿದೆ.

ಈ) ಏಪ್ರಿಲ್ ಮೇ ಮತ್ತು ಜೂನ್ ೮೫ ತಿಂಗಳ ದಿನಗೂಲಿಯನ್ನು ದಿನಾಂಕ ೩೦-೫-೮೫, ೧೮-೬-೮೫ ಮತ್ತು ೨೮-೬-೮೫ರಂದು ಪಾವತಿ ಮಾಡಲಾಗಿದೆ.

ನಿವೃತ್ತ ಪಂಚಾಯಿತ್ ಕಾರ್ಯದರ್ಶಿಗಳಿಗೆ ವಿಶ್ರಾಂತಿ ವೇತನ

೩೨೯. ಶ್ರೀ ಸಿ. ಎಂ. ಉದಾಸಿ (ಹಾನಗಲ್) — ಈ ಕೆಳಗಿನ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಯವರು ಉತ್ತರಿಸುವರೇ :—

ಅ) ಧಾರವಾಡ ಜಿಲ್ಲೆ ಹಾಗೂ ಕಾರವಾರ ಜಿಲ್ಲೆಯಲ್ಲಿ ನಿವೃತ್ತ ಪಂಚಾಯಿತ್ ಕಾರ್ಯದರ್ಶಿಗಳ ಸಂಖ್ಯೆಗಳೆಷ್ಟು ;

ಆ) ಎಲ್ಲಾ ಕಾರ್ಯದರ್ಶಿಗಳಿಗೂ ವಿಶ್ರಾಂತಿ ವೇತನ ಮಂಜೂರಾಗಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?